

ಸಂದರ್ಶಕಿಯೊಂದಿಗೆ ಆಶೀಷ್ ಖಾನ್

**ಕಲಿತ ದಿನಗಳು ಉಸ್ತಾದ್ ಆಶೀಷ್ ಖಾನರ ಮನಸ್ಸಿನಲ್ಲಿ ಹಚ್ಚ ಹಸುರಾಗಿವೆ. ಅನ್ನಪೂರ್ಣಾದೇವಿಯವರ ಕುರಿತು ತುಂಬು ಅಭಿಮಾನದಿಂದ ಮಾತನಾಡುವ ಆಶೀಷ್ ಖಾನರು ಅವರ ಸಂಗೀತ, ತಾಲೀಮ್ ಹಾಗೂ ಬದುಕಿನ ಕುರಿತು ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ತೆರೆದಿಟ್ಟಾಗ...**

“ಹೌದು, ಇದು ನನ್ನ ಅತ್ತೆ ಕಲಿಸಿದ ವಿಶಿಷ್ಟ ಶೈಲಿ. ಅವರು ತುಂಬ ಸಂಕೀರ್ಣವಾದ, ವೈವಿಧ್ಯಮಯವಾದ ತಂತ್ರವನ್ನು ನನಗೆ ಕಲಿಸಿದರು. ಇದೆಲ್ಲ ಹೆಚ್ಚಾಗಿ ಬಲಗೈ ತಂತ್ರಗಳು. ಮುಂದೆ ನನ್ನ ವೈಯಕ್ತಿಕ ತಂತ್ರ ಅಥವಾ ಶೈಲಿಯಾಯಿತು. ಈಗ ವಿಶೇಷವಾಗಿ ನನ್ನಿಂದ ಕಲೀತಾ ಇರೋ ವಿದ್ಯಾರ್ಥಿಗಳು ಆ ರೀತಿ ನುಡಿಸಲಿಕ್ಕೆ ಪ್ರಯತ್ನಿಸುತ್ತಾರೆ. ಯಾಕಂದ್ರೆ ಅವನ್ನು ಸಾಮಾನ್ಯವಾಗಿ ಸರೋದ್‌ನಲ್ಲಿ ನುಡಿಸೋದಿಲ್ಲ.

ಈ ಎಲ್ಲ ವಿವಿಧ ಸಂಕೀರ್ಣ ಬೋಲ್‌ಗಳನ್ನು ನನ್ನ ಅಜ್ಜ ಬಾಬಾ ಸರೋದ್ ವಾದ್ಯದಲ್ಲಿ ಪರಿಚಯಿಸಿದರು. ಹಿಂದೆ ಸರೋದ್‌ನಲ್ಲಿ, ಬಲಗೈಯಲ್ಲಿ ನಾದ ಹೊಮ್ಮಿಸುವ ತಂತ್ರಗಳ ಬೋಲ್‌ಗಳಲ್ಲಿ ಹೆಚ್ಚಿನ ವೈವಿಧ್ಯವಿರುತ್ತಿರಲಿಲ್ಲ. ನೀವು ಹಳೆಯ ಸರೋದ್ ಧ್ವನಿಮುದ್ರಿಕೆಗಳನ್ನು ಕೇಳಿದರೆ ಗೊತ್ತಾಗುತ್ತದೆ. ಆ ಬೋಲ್‌ಗಳು ಬಹಳ ಸರಳವಾಗಿರುತ್ತಿದ್ದವು.

ಬಾಬಾ ಸುರಸಿಂಗಾರ್, ರಬಾಬ್, ಖಾವಾಜ್, ಧೋಲಕ್, ಹೀಗೆ ಹಲವಾರು ವಾದ್ಯಗಳನ್ನು ನುಡಿಸುತ್ತಿದ್ದರು. ಹೀಗಾಗಿ ಅವರಿಗೆ ವಿವಿಧ ವಾದ್ಯಗಳ ಬೋಲ್‌ಗಳನ್ನು ಸರೋದ್‌ನಲ್ಲಿ ಹೇಗೆ ಪಡಿಮೂಡಿಸಬಹುದು ಎಂಬ ಬಗ್ಗೆ ಸ್ಪಷ್ಟವಾದ ಕಲ್ಪನೆಯಿತ್ತು. ವಿಶೇಷವಾಗಿ ಪಖಾವಾಜ್‌ನ ಬೋಲ್‌ಗಳನ್ನು ಸರೋದ್‌ನಲ್ಲಿ ತಂದರು. ಆ ತಂತ್ರವನ್ನು ಕರಗತ ಮಾಡಿಕೊಳ್ಳುವುದು ಬಹಳ ಕಷ್ಟ, ಸರೋದಿನಲ್ಲಿ ಆ ಬೋಲ್‌ಗಳನ್ನು ನುಡಿಸುವುದಕ್ಕೆ ನಾನೂ ಬಹಳ ಅಭ್ಯಾಸ ಮಾಡಬೇಕಾಯಿತು. ಒಮ್ಮೆ ಮೈಹರಿಗೆ ಬಂದಿದ್ದ ಹಿರಿಯ ಸಂಗೀತಗಾರರೊಬ್ಬರು ಬಾಬಾನಿಗೆ ಒಂದು ಪ್ರಶ್ನೆ ಕೇಳಿದರಂತೆ. ಸಿತಾರಿನ ಹಾಗೆ ಸರೋದಿನಲ್ಲಿ ಸಪಾಟ್ ತಾನ್ ನುಡಿಸಲು ಸಾಧ್ಯವಿಲ್ಲವೇ ಎಂದು. ಸರೋದ್ ವಾದ್ಯವು ರಬಾಬ್ ವಾದ್ಯದಿಂದ ಬಂದಿದೆ, ಇದರ ರಚನೆಯ ಕಾರಣದಿಂದಾಗಿ ಹೆಚ್ಚು ಬೋಲ–ಕಾರಿ ನುಡಿಸುತ್ತೇವೆ. ಆದರೆ ಸಪಾಟ್ ತಾನ್‌ಗಳನ್ನು ಪ್ರಯತ್ನಿಸಿದರೆ ಖಂಡಿತವಾಗಿಯೂ ನುಡಿಸಬಹುದು ಎಂದು. ಈ ಸಂಭಾಷಣೆ ನಡೆದ ಸಮಯದಲ್ಲಿ ಅನ್ನಪೂರ್ಣಾದೇವಿಯವರು ಮೈಹರಿನಲ್ಲಿ ಇದ್ದರು. ಅವರೂ ಇದನ್ನು ಕೇಳಿಸಿಕೊಂಡರು. ನಂತರ ಬಾಬಾ ಪ್ರವಾಸಕ್ಕೆ ಹೋದಾಗ ಅತ್ತೆ ನನಗೆ ಕಲಿಸಲು ಆರಂಭಿಸಿದರು. ಆಮೇಲೆ ಬಾಬಾ ಪ್ರವಾಸದಿಂದ ಮರಳಿದ ಮೇಲೆ, ನುಡಿಸಿ ತೋರಿಸಿದಾಗ. ಬಹಳ ಅಭಿಮಾನಪಟ್ಟರು.

ನನ್ನ ಅತ್ತೆ ಅನ್ನಪೂರ್ಣಾದೇವಿಯವರ ಸಂಗೀತ ತುಂಬ ಧ್ಯಾನಾತ್ಮಕವಾಗಿರುತ್ತಿತ್ತು. ಅವರ ಸಂಗೀತ, ಆ ತಾಲೀಮ್, ಆ ಭಾವನೆಗಳು, ಆ ಎತ್ತರಕ್ಕೆ ಯಾರೂ ಇರಲಿಲ್ಲ. ಅವರ ಬದುಕಿನಲ್ಲಿ ನಡೆದ ಕೆಲವು ಘಟನೆಗಳು ತುಂಬ ದುರದೃಷ್ಟಕರ. ತುಂಬಾ ಜನರಿಗೆ ಗೊತ್ತಿಲ್ಲ, ಅತ್ತೆ (ಅನ್ನಪೂರ್ಣಾ ದೇವಿ) ರವಿಶಂಕರ್‌ಗೆ ಕಲಿಸುತ್ತಿದ್ದರು. ಅವರು ರಿಯಾಜ್ ಮಾಡುತ್ತಿದ್ದಾಗ, ಅವರ ಎಲ್ಲ ತಪ್ಪುಗಳನ್ನು ಸರಿಪಡಿಸುತ್ತಿದ್ದರು. ಲಯಕಾರಿ, ರಾಗದಾರಿ ಎಲ್ಲವನ್ನೂ ತಿದ್ದುತ್ತಿದ್ದರು. ರವಿಶಂಕರ್ ಸ್ವ–ಕೇಂದ್ರಿತ ವ್ಯಕ್ತಿ, ಹೆಂಡತಿಯ ಪ್ರತಿಭೆ, ಆ ಸಾಧನೆ, ತಾಲೀಮ್ ಬಗ್ಗೆ ಮೆಚ್ಚುಗೆ, ಗೌರವ ಇರಲಿಲ್ಲ. ಅವರಿಗೆ ತ್ಯಾಗದ ಭಾವನೆ ಇರಲಿಲ್ಲ ಅಥವಾ ಆ ದೊಡ್ಡ ಹೃದಯ, ಉದಾರತೆ ಇರಲಿಲ್ಲ.”

◆ **ವಿದುಷಿ ಅನ್ನಪೂರ್ಣಾದೇವಿ ಹಾಗೂ ಪಂ. ರವಿಶಂಕರರ ಮಗ ಶುಭೋ ಜೊತೆಗೆ ಹಲವು ಕಛೇರಿಗಳನ್ನು ನೀಡಿರುವ, ಬಾಲ್ಯದಿಂದಲೂ ಅವರೊಂದಿಗೆ ಒಡನಾಡಿರುವ, ಉಸ್ತಾದ್ ಆಶೀಷ್ ಖಾನರು ಆ ನೆನಪುಗಳು ಇನ್ನೂ ನನ್ನೆದೆಯಲ್ಲಿ ಭದ್ರವಾಗಿವೆ ಎನ್ನುತ್ತಾರೆ.**

“ನಾವು ಚಿಕ್ಕಂದಿನಲ್ಲಿ ಮೈಹರಿನಲ್ಲಿ ಜೊತೆಯಾಗಿ ಕಲಿಯುತ್ತಿದ್ದೆವು. ಬಾಬಾ ಕೂಡ ಅವನಿಗೆ ಕಲಿಸಿದ್ದಾರೆ. ನಮ್ಮ ಅತ್ತೆ ಅನ್ನಪೂರ್ಣಾದೇವಿಯವರು ಅವನಿಗೆ ತುಂಬಾ ಕಟ್ಟುನಿಟ್ಟಿನ ರಿಯಾಜ್ ನೀಡಿದ್ದರು. ಶುಭೋ ತುಂಬಾ ಸುಶ್ರಾವ್ಯವಾಗಿ ನುಡಿಸ್ತಾ ಇದ್ದ. ಸಿತಾರ್ ನುಡಿಸಾಣಿಕೆಯ ಎಡಗೈ ಮತ್ತು ಬಲಗೈ ತಂತ್ರಗಳು, ಲಯಕಾರಿ, ಭಾವನಾತ್ಮಕತೆ, ಈ ಎಲ್ಲ ಅಂಶಗಳೂ ಅವನಲ್ಲಿ ಅದ್ಭುತವೆನ್ನಿಸುವ ಹಾಗಿತ್ತು. ಜೊತೆಗೆ ಅವನ ನುಡಿಸಾಣಿಕೆಯಲ್ಲಿರುವ ಮಾಧುರ್ಯ ನಮ್ಮ ತಂದೆಯವರಿಂದ ಪಡೆದುಕೊಂಡಿದ್ದು ಎನ್ನಬಹುದು. ನಾವು ಕೆಲವು ಜುಗಲಬಂದಿ ಕಛೇರಿಗಳನ್ನೂ ಮಾಡಿದ್ದೇವಿ. ರವಿಶಂಕರ್ ಯಾವುದೋ ಹಟಕ್ಕೆ ಬಿದ್ದವರಂತೆ ಅವನನ್ನು ಅಮೆರಿಕಕ್ಕೆ ಕರೆದುಕೊಂಡು ಬಂದಾಗ, ನಮ್ಮ ಜೊತೆಗೆ ಬಂದು ಇರು ಅಂತಲೂ ಅವನಿಗೆ ಹೇಳಿದ್ದೆವು. ಅವನೊಬ್ಬನೇ ಇದ್ದು, ನಿಭಾಯಿಸುವುದನ್ನು ಕಲಿಯಲಿ ಎನ್ನುವುದು ರವಿಶಂಕರ್ ಇರಾದೆಯಾಗಿತ್ತು. ಬಹುಶಃ ಅವನು ಇನ್ನೂ ಕೆಲವು ವರ್ಷಗಳು ಇಲ್ಲಿಯೇ ಇದ್ದಿದ್ದರೆ, ಅವನ ಬದುಕು ದುರಂತವಾದ ರೀತಿಯಲ್ಲಿ ಕೊನೆಗೊಳ್ಳುತ್ತಿರಲಿಲ್ಲ ಎನ್ನಿಸುತ್ತೆ.

◆ **ಸರೋದ್‌ನಲ್ಲಿ ಮಿಂಚಿನ ವೇಗದಲ್ಲಿ ಸಪಾಟ್ ತಾನ್‌ಗಳನ್ನು ನುಡಿಸುವುದು ಆಶೀಷ್ ಖಾನರ ಅನನ್ಯತೆ. ರಾಗವೊಂದನ್ನು ಬೆಳೆಸುತ್ತ ಹೋಗುವ ಈ ಪ್ರಕ್ರಿಯೆಯಲ್ಲಿ ಅವರ ಚಿಂತನಾ ಪ್ರಕ್ರಿಯೆ ಹೇಗಿರುತ್ತದೆ, ಮನದಲ್ಲಿ ಸ್ಫುರಿಸುವ ಭಾವಗುಚ್ಛಗಳು ಏನು?**

ಪ್ರತಿಯೊಂದು ರಾಗಕ್ಕೂ ಅದರದ್ದೇ ಆದ ಆರೋಹಣ, ಅವರೋಹಣ, ರಾಗದ ಕಟ್ಟುವಿಕೆ, ಆ ರಾಗದ ನಿಯಮಗಳು ಎಲ್ಲ ಇರುತ್ತವೆ. ಒಟ್ಟಾರೆಯಾಗಿ ಒಂದು ಚೌಕಟ್ಟು ಇರುತ್ತೆ. ನಾನು ಅದರೊಳಗಿದ್ದುಕೊಂಡೇ, ಆ ಕ್ಷಣಕ್ಕೆ ನನ್ನ ಮನಸ್ಸಿನಲ್ಲಿ ಮೂಡಿದ್ದನ್ನು ನುಡಿಸೋದಕ್ಕೆ ಪ್ರಯತ್ನಿಸ್ತೀನಿ. ಇದು ವಿವರಿಸೋದಕ್ಕೆ ತುಂಬ ಕಷ್ಟ. ಪ್ರತಿಸಲವೂ ಇಂಪ್ರೂವೈಸ್ ಮಾಡೋದಕ್ಕೆ ಪ್ರಯತ್ನಿಸ್ತೀನಿ. ನಾವು ಅದೇ ಆಲಾಪ, ಅದೇ ತಂತ್ರವನ್ನು ನಕಲು ಮಾಡ್ತೀವಿ ಅಂತಲ್ಲ. ಪ್ರತಿಯೊಂದು ರಾಗದ ಆಲಾಪಕ್ಕೂ ಅದರದ್ದೇ ಆದ ನಿಯಮಗಳಿರುತ್ತವೆಯಲ್ಲ, ಅದನ್ನು ಅನುಸರಿಸ್ತೀನಿ. ಆದರೆ ಆ ಅನುಸರಿಸುವಿಕೆಯೂ ನನ್ನದೇ ಆದ ರೀತಿಯಲ್ಲಿರುತ್ತದೆ. ನನ್ನ ಅಜ್ಜನ (ಬಾಬಾನ), ಅತ್ತೆಯ ಲಭ್ಯವಿರೋ ಒಂದೆರಡೇ ರೆಕಾರ್ಡಿಂಗ್ ಕೇಳ್ತೀನಿ, ನನಗೆ ಅದರಿಂದ ಸ್ಫೂರ್ತಿ ದೊರೆಯುತ್ತದೆ. ಈ ರಾಗವನ್ನು ಅವರು ಹ್ಯಾಗೆ ಬೆಳೆಸಿದರು, ನನಗೆ ಅವರಿಂದ ಏನು ತಾಲೀಮ್ ಸಿಕ್ಕಿದೆ, ಅದನ್ನು ನನ್ನದೇ ಆದ ರೀತಿಯಲ್ಲಿ ಅನುಸರಿಸೋದಕ್ಕೆ, ಹೊಸತನವನ್ನು ತರುವುದಕ್ಕೆ ಪ್ರಯತ್ನಿಸುತ್ತೀನಿ, ಅಷ್ಟೇ.

ಪ್ರತಿಕ್ರಿಯಿಸಿ: feedback@sudha.co.in